

ಇವತ್ತಂತೂ ಅಂಗಡಿಯಲ್ಲಿ ನಿಂತದ್ದೇ ಆಯಿತು. ಮಾಲೀಕ ಬೇರೆ ಅಲ್ಲೇ ಒಕ್ಕರಿಸಿಕೊಂಡಿದ್ದ. ನಿದ್ದೆ ಬರಲಿಲ್ಲ. ಬೆಳಗ್ಗೆ ಬೇಗ ಎದ್ದು ಅಪ್ಪನಿಗೆ ಮುಖ ತೊಳೆಸಿ, ಏನಾದರೂ ತಿನ್ನಿಸಿ ಏಳು ಗಂಟೆಗೆ ಬಸ್ಸು ಹತ್ತಬೇಕು. ಎಂದೂ ಹೋಗಿರದ ಊರು. ಎಂದೂ ನೋಡಿರದ ಜನ. ಅಂಥದ್ದೊಂದು ದಿನ ಬರಬಾರದು ಅಂದುಕೊಂಡಿದ್ದೆ.

ಕಡುಕತ್ತಲಲ್ಲೇ ಗೋಡೆಯ ಕಡೆ ನೋಡಿದೆ. ಗೋಡೆಯ ಮೇಲಿನ ಪಟ ಮತ್ತು ನನ್ನ ನಡುವೆ ಕತ್ತಲು ಅಡ್ಡವಾಗಿತ್ತು. ಪಟ ನೋಡಲು ನನಗೆ ಬೆಳಕೇ ಬೇಕಿರಲಿಲ್ಲ. ಆ ಪಟ ಮತ್ತು ಆ ಪಟದೊಳಗಿನ ನಗುವು ಎಂದೋ ನನ್ನ ಕಣ್ಣಲ್ಲಿ ಮಚ್ಚೆಯಾಗಿ ಉಳಿದು ಹೋಗಿದೆ. ಹಳೆಯದಾದ ಆ ಪಟ ನೋಡುತ್ತಾ ನಿಂತಾಗಲೆಲ್ಲಾ ಅಜ್ಜಿ ಹೇಳುತ್ತಿದ್ದಳು 'ತುಂಬಾ ಚೆಲುವಾಗಿದ್ದಳು ಹೆಂಗಸು'. ಪಟವನ್ನು ದಿಟ್ಟಿಸಿ ನೋಡುತ್ತಿದ್ದೆ. ಲಕ್ಷಣವಾಗಿದ್ದಳು. ಒಂದು ಉದ್ದದ ಸ್ಟೂಲ್ ಮೇಲೆ ಮೊಳಕೈ ಊರಿ ನಿಂತಿದ್ದಳು. ಅದರ ಮೇಲೆ ಒಂದು ಹೂದಾನಿ ಇತ್ತು. ಅದೂ ಅವಳ ಕಡೆಯೇ ನೋಡುತ್ತಿತ್ತು. ಈ ದಟ್ಟ ಕತ್ತಲಲ್ಲೂ ಪಟದೊಳಗಿನ ನಗು ಕಾಣಿಸಿತು. ಮತ್ತು ಆ ಪಟವನ್ನು ಕಿತ್ತು ಎಲ್ಲೋ ಅಡಗಿಸಿದ್ದ ದಿನಗಳೂ ನೆನಪಾದವು.

ಅವತ್ತು ಅಜ್ಜಿ ನೊಂದುಕೊಂಡಿದ್ದಳು. ಅಪ್ಪ ಯಾವುದೊ ಶೂನ್ಯವನ್ನು ನೋಡುತ್ತಿರುವಂತೆ ಸುಮ್ಮನೆ ಎತ್ತಲೊ ನೋಡುತ್ತಿದ್ದ. ಅಪ್ಪನ ಒಂದು ತುಣುಕು ದನಿ ಆಚೆ ಬಂದಿದ್ದರೂ ನಾನು ಆ ಪಟ ಕೀಳುವುದನ್ನು ನಿಲ್ಲಿಸಿ ಬಿಡುತ್ತಿದ್ದೆನಾ? ಗೊತ್ತಿಲ್ಲ. ಬಹುಶಃ ನಾನು ಪ್ರಥಮ ಪಿಯುಸಿ ಓದುತ್ತಿದ್ದ ದಿನಗಳವು. ಕಾಲೇಜಿನಿಂದ ಬಂದವನೇ ಬುಕ್ಕು ಬಿಸಾಕಿ ಪಟವನ್ನು ತೆಗೆದು ಎಸೆಯಲು ಹೋಗಿದ್ದೆ. ಅಜ್ಜಿ ತಡೆದಿದ್ದಳು.

'ಗ್ವಾಡಿ ಮ್ಯಾಲಾ ಬ್ಯಾಡ್ ಅಂದ್ರೆ ಬ್ಯಾಡ್ ಬಿಡು'. ಅಜ್ಜಿ ಗದರಿ, ನನ್ನ ಕೈಯಿಂದ ಕಿತ್ತುಕೊಂಡು ಟ್ರಂಕ್ ಒಳಗಡೆ ಅಡಗಿಸಿಟ್ಟಿದ್ದಳು. ಮತ್ತೆ ಆ ಪಟ ಗೋಡೆ ಮೇಲೆ ಬಂದು ಕೂತದ್ದು ಲಲಿತಿ ಮನೆಗೆ ಬಂದ ದಿನವೇ!

ನಾಯಿಗಳು ಕಿತ್ತಾಡಿಕೊಂಡು ಎಲ್ಲಿ ಮಲಗಿದವೊ. ರಾತ್ರಿ ಮತ್ತಷ್ಟು ಮೌನವಾಯ್ತು. ನಿದ್ದೆ ಹತ್ತಿರವೂ ಸುಳಿಯಲಿಲ್ಲ. ಹೊಟ್ಟೆಯೊಳಗೆ ಸಣ್ಣ ಸಂಕಟ. ಎದ್ದು ಹೊರಬಂದೆ. ಬೀದಿ ಭಯ ಹುಟ್ಟಿಸುವಷ್ಟು ಖಾಲಿಯಿತ್ತು. ಮುಗಿಲಲ್ಲಿ ನಾಲ್ಕು ತುಂಡು ಮೋಡಗಳು ದಾರಿ ಮರೆತು ಯೋಚಿಸುತ್ತಾ ನಿಂತಿದ್ದವು. ಅಂಗಳಕ್ಕೆ ಬಂದು ತಿರುಗಿ ಮನೆಯನ್ನು ನೋಡಿದೆ. ಅದು ನನ್ನನ್ನು ಮರುಕಪಟ್ಟು ನೋಡತೊಡಗಿತು. ಒಂದು ವೇಳೆ ನಾಳೆ ಎಲ್ಲವೂ ಸರಿ ಹೋದರೆ ಎಲ್ಲಾ ಮನೆಗಳಂತೆ ನನ್ನ ಮನೆಯೂ ಇಂತಹ ಸರಿಹೊತ್ತಿನಲ್ಲಿ ನೆಮ್ಮದಿಯ ನಿದ್ದೆ ಮಾಡಬಹುದು. ಎಲ್ಲರ ಮನೆಯಂತೆ ಬೆಳಗ್ಗೆ ಆಕಳಿಸಿ ಮೈ ಮುರಿಯುತ್ತಾ ಏಳಬಹುದು.

ಹೊರಗೆ ಕಟ್ಟೆಯ ಮೇಲೆ ಕೂತೇ ಇದ್ದೆ. ಅಪ್ಪನ ಕೆಮ್ಮು ಅಶರೀರವಾಣಿಯಂತೆ ಕೇಳಿಸುತ್ತಿತ್ತು. ಅಪ್ಪ ಏನೋ ಹೇಳಲು ಯತ್ನಿಸುತ್ತಿದ್ದಾರೆ ಎಂಬ ಅನುಮಾನ ನನಗೆ. ಅವರ ಕೆಮ್ಮನ್ನು ಅನುವಾದಿಸಿಕೊಳ್ಳಲು ಬೇಕಾದ ಭಾವನೆಯೊಂದನ್ನು ನಾನು ಕಲಿಯಬೇಕಿತ್ತು ಎಂಬ ಯೋಚನೆಯೂ ಬಂತು. ಅಪ್ಪ ಗೋಡೆಗೆ ಒರಗಿ ಕೂತ ಹೊತ್ತಿನಲ್ಲಿ ಬರೀ ದಾರಿ ನೋಡುತ್ತಿದ್ದ.

ಅಪ್ಪನ ಕೆಮ್ಮು ನಿಂತಿರಲಿಲ್ಲ. ಎದ್ದು ಒಳಗೆ ಹೋದೆ. ದೀಪ ಹಾಕಿ ಅವರಿಗೆ ಸ್ವಲ್ಪ ನೀರು ಕುಡಿಸಿ ಬೆನ್ನು ನೀವಿದೆ. ಗಡಿಯಾರ ನೋಡಿದೆ. ನಾಲ್ಕು ಗಂಟೆ ದಾಟಿದೆ. ಸ್ವಲ್ಪವಾದರೂ ಮಲಗೋಣವೆಂದು ಚಾಪೆ ಬಳಿ ಬಂದೆ. 'ನಾಳೆಯೇ ಹೋಗಿ ಬಂದು ಬಿಡೋಣ. ನೀನು ಬಂದ್ರೇನೆ ಸರಿಹೋಗೋದು ಇದು. ಹರಿಹರಕ್ಕೆ ಹೊಸಪೇಟೆ ಬಸ್ಸಿಗೆ ಬಾ. ನಾನು ಅಲ್ಲೆ ಹತ್ತಿಕೊಳ್ತೀನಿ. ದಾವಣಗೆರೆಯಲ್ಲಿ ಚೂರು ಕೆಲಸ ಇದೆ'. ನಿನ್ನೆ ಬೆಳಗ್ಗೆ ಮಾವ ನನ್ನನ್ನು ಕೂರಿಸಿಕೊಂಡು ಆಡಿದ ಮಾತುಗಳೆಲ್ಲವೂ ನುಗ್ಗಿ ಬಂದವು.

ನಾನೀಗ ಯಾವ ಕಾರಣಕ್ಕಾಗಿ ಹೋಗಬೇಕು? ಅಪ್ಪನಿಗಾಗಿಯೊ.. ನನಗಾಗಿಯೊ ಅಥವಾ ಈ ಊರಿನವರಿಗಾಗಿಯೊ.. ಹೋಗಿ ಬಂದ ಕ್ಷಣ ಅಥವಾ ಅವರು ಒಪ್ಪಿದ ಕ್ಷಣ ಎಲ್ಲವೂ ಸರಿಯಾಗಿ ಬಿಡುತ್ತದಾ? ನಾನು ಮತ್ತು ಅಪ್ಪ ತಿಂದ ಅವಮಾನದ ಏಟುಗಳನ್ನು ಸ್ನಾನ ಮಾಡಿದಂತೆ ಈಗ ಅದರಿಂದ ತೊಳೆದುಕೊಂಡು ಬಿಡಬಹುದಾ? ಪ್ರಶ್ನೆಗಳು ನನ್ನನ್ನೇ ಕಂಗಾಲಾಗಿಸಿದವು. ನಿದ್ದೆ ಕವಿಯತೊಡಗಿತು.

***

'ಗ್ರುಗ್ರುಗ್ರೂ; ಸದ್ದು. ದಢಕ್ಕನೆ ಎಚ್ಚರವಾಯ್ತು. ಅಪ್ಪ ಕೂಗುತ್ತಿದ್ದ. ಅವನು ಯಾವಾಗಲೇ ಕಕ್ಕಸು ಮಾಡಿಕೊಂಡರೂ ಹೀಗೆ ನಾಯಿ ಕೂಗಿದಂತೆ ಕೂಗುತ್ತಾನೆ. ಎದ್ದು ಅವನ ಬಳಿ ಓಡಿದೆ. ಕಕ್ಕಸು ತೊಳೆದು ಬಟ್ಟೆ ಬದಲಿಸಿ, ಮೈ ಒರೆಸಿ ಮತ್ತೆ ಮಲಗಿಸಿ ಬಂದೆ. ಬೆಳಕಾಗತೊಡಗಿತ್ತು. ಅನ್ನ ಮಾಡಲು ಇಟ್ಟು, ಮನೆ ಗುಡಿಸಿದೆ. ಅಜ್ಜಿ ನಮ್ಮನ್ನು ಬಿಟ್ಟು ಹೋದ ಮೇಲೆ ಮನೆಯಲ್ಲಿ ನಾನು ಅಪ್ಪ ಇಬ್ಬರೇ. ಅಜ್ಜಿ ಇದ್ದಾಗ ಈ ಕೆಲಸಗಳನ್ನೆಲ್ಲಾ ಆಕೆಯೇ ಮಾಡುತ್ತಿದ್ದಳು. ನಾನು ಎರಡನೇ ಪಿಯುಸಿ ಪರೀಕ್ಷೆ ಬರೆಯುವ ದಿನಗಳಲ್ಲೇ ಅಜ್ಜಿ ತೀರಿಕೊಂಡಳು. ಆಗಿನ್ನು ಅಪ್ಪನಿಗೆ ಪಾರ್ಶ್ವವಾಯು ಬಡಿದಿರಲಿಲ್ಲ. ಬಡಿಯದೆ ಇದ್ದರೂ ಅಪ್ಪನೇನು ಈ ಮೊದಲು ಎಲ್ಲರಂತೆ ಇರಲಿಲ್ಲ. ಹುಟ್ಟಿನಿಂದಲೂ ಅವರಿಗೆ ಮಾತನಾಡಲು ಬರುತ್ತಿರಲಿಲ್ಲ. ಒಂದು ರೀತಿ ದನಿ ಹೊರಡಿಸಿ ಸನ್ನೆ ಮಾಡಿ ಮಾತಿಗೆ